ಕಾಣುತ್ತಿಲ್ಲವೆನ್ನುವುದು ನನ್ನ ಅಭಿಮತ. ಸಾಹಿತ್ಯವನ್ನು ಅಧ್ಯಯನದ ಶಿಸ್ತಾಗಿ ನೋಡಿರದ ವೃತ್ತಿಪರಲೋಕದಿಂದ ಬರೆಯುತ್ತಿರುವ ಲೇಖಕರಲ್ಲೂ ಚಮತ್ಕಾರಿಕ 'ಸರಕು' ಮುಗಿತಾಯಗೊಂಡ ಸಮಸ್ಯೆ ಎದುರಿಸುತ್ತಿದೆ. ಜನಪ್ರಿಯ ಸಂಸ್ಕೃತಿಯ ಮಾನದಂಡಗಳಾದ ಪ್ರಶಸ್ತಿ—ಪುಸ್ತಕ ಪ್ರಕಟಣೆ—ಪತ್ರಿಕಾ ಪ್ರಚಾರಗಳ ಕುಣಿಕೆಯಲ್ಲಿ ಹೊಸ ಲೇಖಕರು ಸಿಲುಕಿದ್ದಾರೆ. ಅನುಸರಿಸಬೇಕಾದ 'ಮಾದರಿ'ಗಳ ಮೆರವಣಿಗೆ ತರುಣ ಬರಹಗಾರರು ಪ್ರಯೋಗಗಳನ್ನು ಕೈಗೊಳ್ಳಲು ಅಡ್ಡಿಯನ್ನುಂಟುಮಾಡುತ್ತಿದೆ. ಏಕರೂಪತೆ, ಸಿದ್ಧಮಾದರಿ, ಧ್ರುವೀಕರಣಗಳ ಪರಿಕಲ್ಪನೆಯನ್ನು ಒಡೆದು ಬಹುರೂಪ, ವೈವಿಧ್ಯಮಯ ನಿರೂಪಣೆ, ಮತ್ತು ಸಮಷ್ಟಿ ಸಮಾಗಮವನ್ನು ಹೊಂದಿದ ಕಥನ ಪರಂಪರೆ ಕಟ್ಟುವುದಷ್ಟೇ ಇದಕ್ಕೆ ಉತ್ತರವಾಗಿದೆ.

ಹಾಗೆಂದು ತೀರಾ ನಿರಾಶಾದಾಯಕ ಸನ್ನಿವೇಶವಿದೆ ಎಂದೇನೂ ಅನ್ನಿಸುವುದಿಲ್ಲ. ಪ್ರಾಮಾಣಿಕವಾಗಿ ತಮ್ಮ ಹೊಸ ಧ್ವನಿಯನ್ನು ಕೇಳಿಸಲು ಪ್ರಯತ್ನಿಸುವ ಲೇಖಕರ ಸಂಖ್ಯೆ ದೊಡ್ಡದಿದೆ.

★★★

ಕಥನಶೈಲಿ, ನಿರೂಪಣಾ ವಿಧಾನ, ಸಮರ್ಪಕ ವಿನ್ಯಾಸ, ತಂತ್ರ, ವಸ್ತುವಿನ ಕುರಿತು ಗಾಢ ಚಿಂತನೆ, ಈ ಕಥೆಯ ಮೂಲಕ ಏನನ್ನು ಹೇಳಬಯಸುತ್ತೇನೆ? ಇಂಥ ಎಷ್ಟೋ ವಿಷಯಗಳನ್ನು ಲೇಖಕ ಪ್ರತಿ ಕಥೆ ಬರೆಯುವಾಗಲೂ ಕೇಳಿಕೊಳ್ಳಬೇಕು ಮತ್ತು ಅವನ್ನು ಸಾಧಿಸುವ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ನಕಲು, ಅನುಕರಣೆಗಳಿಂದ ಏನು ತಾನೇ ಪಡೆಯಲು ಸಾಧ್ಯ? ತಥಾಕಥಿತ 'ಸಿದ್ಧಮಾದರಿ'ಗಳ ಆಕರ್ಷಣೆಯ ಹೊರತಾಗಿಯೂ ನೈಜ ಕಳಕಳಿಯ ಸಾಹಿತ್ಯ ಸೃಷ್ಟಿ ಸಾಧ್ಯವಿದೆ. ಅಂಥ ಹೊಸ ಪ್ರಯತ್ನಕ್ಕೆ ಒಡ್ಡಿಕೊಳ್ಳುವ ಎದೆಗಾರಿಕೆ ಲೇಖಕರಿಗಿರಬೇಕು. ಆ ಪ್ರಯತ್ನದಲ್ಲಿ ನನ್ನ ಕಥೆಗಳಿವೆ. ಸಫಲತೆ—ವಿಫಲತೆ ಚರ್ಚೆಯೇ ಬೇರೆ, ಎಂದಷ್ಟೇ ಹೇಳಬಹುದು.

ನನ್ನ ನಂಬಿಕೆ ಏನಿದ್ದರೂ ವರ್ತಮಾನದಲ್ಲಿ. ಈಗಿನ ಅನುಭವವನ್ನು ದಾಖಲಿಸುವ ಮತ್ತು ಹೊಸ ಅನುಭವವನ್ನು ಹುಡುಕಿಕೊಂಡು ಹೋಗುವ ಕೆಲಸ ನಿರಂತರ. ಹಾಗೆಂದೇ, ಕಥನ ಪರಂಪರೆಯಲ್ಲಿ ನನ್ನ ಕಥೆಗಳ ಸ್ಥಾನವೇನು? ಎನ್ನುವ ದೊಡ್ಡ ಪ್ರಶ್ನೆಯನ್ನು ಕೇಳಿಕೊಳ್ಳಲಾರೆ. ಒಂದು ಕಥೆ ಬರೆದಾದ ಮೇಲೆ ಉಂಟಾಗುವ ಖಾಲಿತನ, ಅಸ್ವಸ್ಥತೆ, ಒಂಟಿತನಗಳು ಮತ್ತೊಂದು ಕಥೆಯನ್ನು ಆವಾಹಿಸಿಕೊಳ್ಳುವವರೆಗೂ ಬೆನ್ನಟ್ಟುತ್ತವೆ. ನಿಸರ್ಗದ ಕೃಪೆ ದೊಡ್ಡದು. ಬರೆಯಬೇಕಾದ ಅಂಥ ಎರಡುಮೂರು ಕಥೆಗಳನ್ನು ಐದಾರು ವರ್ಷಗಳಿಂದ ನನ್ನೊಳಗೆ ಬೆಳಸುತ್ತಿದೆ.

ನನಗೆ ವಿಶಿಷ್ಟವೆನ್ನಿಸಿದ ಜೀವನಾನುಭವವೊಂದನ್ನು ಕಥೆಯ ಮೂಲಕ ಹೇಳಿದ ಮೇಲೆ ಅದು ನನ್ನನ್ನು ಕೊಂಚ ಉದಾತ್ತಗೊಳಿಸಿ, ಅರೆಚಣ ಬಿಡುಗಡೆಯ ಭಾವವನ್ನು ನೀಡಿದೆ, ಎಂದು ಯಾವಾಗಲೂ ಅನ್ನಿಸುತ್ತದೆ. ಲೇಖಕನಿಗೆ ನಿಜವಾದ ಅರ್ಥದಲ್ಲಿ ದೊರಕುವ ಸಾರ್ಥಕ ಕ್ಷಣ ಇದೇ ಆಗಿದೆ.

✿